


## ಬಹುರೂಪಗಳ ಬೆಳಕಿಂಡಿ

‘ಬನ್ನಿ ಹಬ್ಬದ ಬಹುರೂಪಗಳು’ (ಅ. 03, ಅರುಣ್ ಜೋಳದಕೂಡ್ಲಿಗಿ) ಮುಖಪುಟ ಲೇಖನ ಭಾರತದ ಬಹುತ್ವದ ಬಹುರೂಪಗಳ ಬೆಳಕಿಂಡಿಯಂತಿದೆ. ಎಲ್ಲಾ ವರ್ಗದ ಓದುಗರು ಅರ್ಥ ಮಾಡಿಕೊಳ್ಳುವ, ಅರಗಿಸಿಕೊಳ್ಳುವ ಅಧ್ಯಯನಾತ್ಮಕ ಲೇಖನವಾಗಿದೆ. ಏಕದೇಶ, ಏಕಭಾಷೆ, ಏಕಸಂಸ್ಕೃತಿ, ಏಕಪ್ರಭುತ್ವ ಮುಂತಾದ ‘ಏಕ’ ಪರಿಕಲ್ಪನೆಯ ಹೇರಿಕೆಯ ಈ ಹೊತ್ತಿನಲ್ಲಿ ಭಾರತದ ಬಹುಧಾರೆಗಳ ಬಹುದಾರಿಗಳ ಕಡೆಗೆ ಲೇಖಕರು ಅರ್ಥಪೂರ್ಣವಾಗಿ ಬೆಳಕು ಚೆಲ್ಲಿದ್ದಾರೆ. ಪುರಾಣಕಥನ ನೆಲೆಯ ಪಾರಂಪರಿಕ ಆಯುಧ ಪೂಜೆ ಇಂದು ವೃತ್ತಿ ಪರಿಕರಗಳ ಪೂಜೆಯಾಗಿ ರೂಪಾಂತರ ಹೊಂದಿರುವುದು ಗಮನಾರ್ಹ ಸಂಗತಿ.

—ಪ್ರೊ. ಮಲ್ಲಿಕಾರ್ಜುನ ಕಲಮರಹಳ್ಳಿ, ಬೆಂಗಳೂರು

## ‘ಬನ್ನಿ’ ಶ್ರೇಷ್ಠತೆಯ ಅನಾವರಣ

ಬನ್ನಿ ಹಬ್ಬದ ಕುರಿತ ಲೇಖನ ವಿಶೇಷ ಮಾಹಿತಿಗಳನ್ನು ಒಳಗೊಂಡಿತ್ತು. ಒಂದು ಹಬ್ಬದ ಆಚರಣೆಯ ಹಿಂದೆ ಪ್ರಭುತ್ವ ನೆಪ ಮಾತ್ರ ಆಗಿದ್ದರೆ ಜನಸಾಮಾನ್ಯರು ಅದರ ವಾರಸುದಾರರಾಗಿರುತ್ತಾರೆ. ಬಹುತೇಕ ಹಳ್ಳಿಗಳಲ್ಲಿ ಈ ಹಬ್ಬವನ್ನು ಸಾಮೂಹಿಕವಾಗಿ ಆಚರಿಸುತ್ತಾರೆ. ಏನೇ ದ್ವೇಷ ವೈಮನಸ್ಸು ಇದ್ದರೂ ಬನ್ನಿ ಹಬ್ಬದ ದಿನ ಎಲ್ಲವನ್ನೂ ಮರೆತು ‘ಬನ್ನಿ ಕೊಟ್ಟು ಬನ್ನಿ ತಗೊಂಡು ಬಂಗಾರದಂಗೆ ಇರೋಣ’ ಎನ್ನುವ ಮನೋಭಾವ ಈ ಹಬ್ಬದ ಶ್ರೇಷ್ಠತೆ. ನಾನು ಇಲ್ಲಿಯವರೆಗೂ ಈ ಹಬ್ಬದ ಹಿನ್ನೆಲೆಯ ಒಂದೆರಡು ಅಂಶಗಳನ್ನು ಮನಗಂಡಿದ್ದೆ. ಈ ಲೇಖನದಿಂದ ಬನ್ನಿ ಹಬ್ಬದ ಬಹುರೂಪಗಳು, ಆಚರಣೆಗಳು, ಸ್ಥಳೀಯ ಸಂಸ್ಕೃತಿಯೊಂದಿಗೆ ಅದು ತಳುಕು ಹಾಕಿಕೊಂಡ ಸಂಗತಿಗಳು ಗೋಚರಿಸಿದವು.

—ದೇವಿಂದ್ರಪ್ಪ, ಹಂಪಿ

## ತಿಳಿಹಾಸ್ಯದ ರಸಾಯನ

‘ಪರಿಮಳಕ್ಕೆ ಪದವಿಲ್ಲ’ (ಅ. 03, ಎಸ್. ಶೇಷಾದ್ರಿ ಕಿನಾರ) ಕಥೆಯಲ್ಲಿ ತಿಳಿಹಾಸ್ಯದ ರಸಾಯನ ಉಣಬಡಿಸಿದ್ದಾರೆ.

ಅಜ್ಜಿ ಮೊಮ್ಮಗಳ ಅನುಬಂಧ, ಪಕೋಡ ಪರಿತಾಪದ ಅಳಲು, ಅಜ್ಜಿ ಆಸೆಗೆ ಎಳ್ಳು ನೀರಾದ ಕಾಶಿಯಾತ್ರೆ ನೆನಪು ಮುದಗೊಳಿಸುತ್ತವೆ. ಲೇಖಕರ ಪದ ಪ್ರಯೋಗ ಅದ್ಭುತ. ನೊಚ್ಚಗೆ, ಮೀಗೆರೆದು, ಬಿಸುಪನ್ನು, ಸುಸ್ಕಾರ, ತುಡುಗು ಇಂತಹ ಪದ ಬಳಕೆ ಅನುಭಾವದ ಮೂಸೆಯಿಂದ ಬರುವಂತಹವು. ಪಕೋಡದ ವಿಷಯ ಇಟ್ಟುಕೊಂಡು ಸುಂದರ ಕಥೆ ನೀಡಿದ ಲೇಖಕರಿಗೆ, ಪೂರಕವಾಗಿ ಓದುಗರ ಮೂಗರಳಿಸುವ ಚಿತ್ರಕಲೆ ಒದಗಿಸಿದ ಸಂತೋಷ್ ಸಸಿಹಿತ್ಲು ಅವರಿಗೆ ಅಭಿನಂದನೆ.

—ಎಸ್.ಎನ್. ಕುಮಾರ ಸ್ವಾಮಿ

## ಹೊಸ ಹೊಳಪಿನ ಕಥೆ

ಕಥೆ ಓದಿ ಮುಗಿಸಿ ಎರಡು ದಿನವಾದರೂ ಪಕೋಡದ ಪರಿಮಳ ನನ್ನ ಸುತ್ತ ಸುಳಿದು ಕಾಡುತ್ತಲೇ ಇದೆ. ತುಂಬಾ ಖುಷಿ ಕೊಟ್ಟ ಹೊಸ ಹೊಳಪಿನ ಕಥೆ.

—ಶ್ಯಾಮಲಾ ಎಚ್.ಎನ್., ಬೆಂಗಳೂರು



## ಪಿಕ್ಚರ್ ಕಾರ್ಡ್ ದಿನಗಳು

‘ಮೈಸೂರಿನ ಹಿರಿಮೆಗೆ ಪಿಕ್ಚರ್ ಕಾರ್ಡ್ ಠಸ್ಸೆ’ (ಅ. 03, ಎನ್. ಜಗನ್ನಾಥ ಪ್ರಕಾಶ್) ಓದುತ್ತಿದ್ದಂತೆ, ಪಿಕ್ಚರ್ ಕಾರ್ಡ್ ಖರೀದಿಸಿ ನನ್ನ ಗೆಳೆಯರಿಗೆ, ಬಂಧುಗಳಿಗೆ ಕಳಿಸಿ, ನನ್ನ ಪ್ರವಾಸದ ಬಗ್ಗೆ ಕಾರ್ಡಿನ ಪುಟ್ಟ ಸ್ಥಳದಲ್ಲಿ ಬರೆದು, ಅವರನ್ನೂ ಪ್ರವಾಸಕ್ಕೆ ಪ್ರೋತ್ಸಾಹಿಸುತ್ತಿದ್ದ ದಿನಗಳು ನೆನಪಿಗೆ ಬಂದವು.

—ರಘುನಾಥರಾವ್ ತಾಪ್ಸೆ, ದಾವಣಗೆರೆ

## ಮಂಗಳೂರಲ್ಲೂ ಪೋಸ್ಟ್‌ಕಾರ್ಡ್

90ರ ದಶಕದಲ್ಲಿ ನಾನು ಮಂಗಳೂರಿನಲ್ಲಿ ಗ್ರೀಟಿಂಗ್ ಅಂಗಡಿ ಹೊಂದಿದ್ದು, ಹಡಗಿನಲ್ಲಿ ಬರುತ್ತಿದ್ದ ವಿದೇಶಿಯರು ಆಸಕ್ತಿಯಿಂದ ಈ ಕಾರ್ಡ್‌ಗಳನ್ನು ಖರೀದಿಸುತ್ತಿದ್ದರು, ಮಂಗಳೂರಿನ ಸ್ಥಳಗಳ ಬಗ್ಗೆ ವಿಚಾರಿಸುತ್ತಿದ್ದರು. ಕೊನೆಗೆ ಸ್ಥಳೀಯ ಪ್ರೆಸ್‌ನವರು ಛಾಪಿಸಿ ಯಶಸ್ವಿಯಾದರು.

—ಪಿ. ಶ್ರೀಕಾಂತ್ ರಾವ್, ಮಂಗಳೂರು

## ಮನಕಲಕಿದ ಕಥನ

‘ನಾನು ಕೊಂದ ಉಡ’ (ಅ. 03, ಸಹನಾ ಕಾಂತಬೈಲು) ಲೇಖನದಲ್ಲಿ ಉಡದ ಚಿತ್ರ ನೋಡಿ ‘ಇದನ್ನು ಓದಿ ಹೇಳು’ ಎಂದು ಪಟ್ಟುಹಿಡಿದು ಕೇಳಿದ ನನ್ನ 8 ವರ್ಷದ ಮಗ. ಓದು ಮುಗಿದ ನಂತರ ಭಾರವಾದ ದನಿಯಲ್ಲಿ, ‘ಮಮ್ಮಿ ಪಾಪ ಉಡ ಸತ್ತೋತು, ಇನ್ಮೇಲೆ ನಾನು ಯಾವ ಕ್ರಿಮಿಕೀಟಕ್ಕೂ ಹೊಡೆಯಲ್ಲ ನಿನಗೂ ಹೊಡೆ ಎಂದು ಹೇಳಲ್ಲ’ ಎಂದ. ನಾನೂ ನೊಂದ ಮನದಲ್ಲಿ ಹೂಂ ಎಂದೆ.

—ರೇಶ್ಮಾ ಗುಳೇದಗುಡ್ಡಾಕಾರ್

## ಗರಿಗರಿ ಪಂಚೆ ನಾನು!

‘ಪಂಚೆಯ ವಿಷ್ಯ... ಬ್ಯಾಡವೂ ಶಿಷ್ಯ...’ (ಅ. 03, ಸುಮಾ ರಮೇಶ್) ಪಂಚೆಯ ವೃತ್ತಾಂತ ತಿಳಿಹಾಸ್ಯದಿಂದ ಕೂಡಿದ್ದು ಪಂಚೆ ಬಗ್ಗೆ ಪ್ರೀತಿಯುಳ್ಳ ನನ್ನಂಥವರಿಗೆ ಮುದ ನೀಡುತ್ತದೆ. ಕಾಲಕ್ರಮೇಣ ಸಾರ್ವಜನಿಕವಾಗಿ ಪಂಚೆ ಬಳಕೆ ಕಡಿಮೆಯಾಗಿದ್ದರೂ ಧಾರ್ಮಿಕ, ಸಾಂಸ್ಕೃತಿಕ ಸ್ಥಳಗಳಲ್ಲಿ ಪಂಚೆಗಿರುವ ಮರ್ಯಾದೆ ಹೆಚ್ಚು. ಬಹೂಪಯೋಗಿ ಪಂಚೆ ಬಗ್ಗೆ ಹಿರಿಯರೊಬ್ಬರು ಹೇಳಿದ ಮಾತುಗಳಿವು:

‘ಉಟ್ಟರೆ ಲುಂಗಿಯಾದೆ
ತೊಟ್ಟರೆ ಶಾಲಾದೆ
ಕಟ್ಟಿದರೆ ತಲೆಗೆ
ರುಮಾಲಾದೆ
ಕಟ್ಟದೇ ಹಾಸಿದರೆ
ಮೇಲು
ಹೊದಿಕೆಯಾದೆ
ನೀನಾರಿಗಾದೆಯೋ ಎಲೆ ಪ್ಯಾಂಟೆ,
ಗರಿಗರಿ ಪಂಚೆ ನಾನು...’

—ರಾಮಚಂದ್ರ ಎಂ.ಆರ್., ಬೆಂಗಳೂರು



## ಪಂಚೆಯ ಭಿನ್ನ ಶೈಲಿ

ಹಾಸ್ಯಭರಿತ ಲೇಖನ ಬಹಳ ಸೊಗಸಾಗಿದೆ. ಪಂಚೆ ಉಡುವ ಶೈಲಿ ಬಗ್ಗೆಯೂ ಒಂದು ಮಾತು. ನಮ್ಮ ಕರ್ನಾಟಕದಲ್ಲಿ, ಮುಖ್ಯವಾಗಿ ಹಳೇ ಮೈಸೂರು ಪ್ರಾಂತ್ಯದಲ್ಲಿ ಪಂಚೆ ಉಡುವ ಶೈಲಿ (ದಕ್ಷಿಣ ಕನ್ನಡದವರನ್ನು ಹೊರತುಪಡಿಸಿ) ಆಂಧ್ರ, ತೆಲಂಗಾಣ, ಕೇರಳ ಮತ್ತು ತಮಿಳುನಾಡಿನವರು ಉಡುವುದಕ್ಕಿಂತ ಭಿನ್ನ. ಪಂಚೆ ತುದಿ ಎಡ ಭಾಗಕ್ಕೆ ಬರುವಂತೆ ಉಡುವುದೇ ನಮ್ಮ ವಿಶೇಷ. ಈ ಶೈಲಿಯಲ್ಲಿ ವರನಟ ರಾಜಕುಮಾರ್, ಸಿದ್ದರಾಮಯ್ಯ ಹಾಗೂ ದೇವೇಗೌಡರು ಉಡುತ್ತಾರೆ. ಈಚೆಗೆ ಈ ಶೈಲಿ ಮಾಯವಾಗಿ, ಸೊಂಟದ ಸುತ್ತ ವೆಲ್ಕ್ರೋ ಅಳವಡಿಸಿದ ಪಂಚೆ ಲಭ್ಯವಿದ್ದು, ಯುವಕರಿಗೆ ಸುಲಭ ಎನಿಸಿದೆ. ನಮ್ಮ ವಿಶೇಷ ಶೈಲಿ ಮತ್ತೆ ಪ್ರಚಲಿತಕ್ಕೆ ಬರಬೇಕಿದೆ.

—ನಾಗರಾಜ್ ಜೋಯಿಸ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in